ಬೋ.ಪಾ. ವೆಂಕಟೇಶ್, ಹೊಸಕೋಟೆ
*ನೀರಲ್ಲಿಟ್ಟರೆ ಬಾಡಿಹೋಗುತ್ತದೆ, ಕೆಂಡದಲ್ಲಿಟ್ಟರೆ ಹುಟ್ಟುತ್ತದೆ. ಅದು ಏನು?*



ಹುರುಳಿ ಹಪ್ಪಳದ ರುಚಿ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ನದಿಗಳಿಗೆ ಹೆಣ್ಣಿನ ಹೆಸರು; ಬೆಟ್ಟಗಳಿಗೇಕೆ ಗಂಡಸರ ಹೆಸರು?*
ನದಿ ತವರಿನಿಂದ ಬೇರೆಡೆಗೆ ಸಾಗುವ ಹೆಣ್ಣು; ಬೆಟ್ಟ ಇದ್ದಲ್ಲೇ ಬಿದ್ದಿರುವ ಗಂಡು.

ಡಿ.ದೊಡ್ಡಲಿಂಗೇಗೌಡ, ಕೊಳ್ಳೇಗಾಲ
*ರಕ್ತಕ್ಕಿಂತ ನೀರೇ ಗಟ್ಟಿ. ನಿಜವೆ?*
ನಿಜ. ಜಲಮಾಲಿನ್ಯ ಆ ಮಟ್ಟ ಮುಟ್ಟಿದೆ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಸರ್ಕಾರಿ ನೌಕರರ ಮಕ್ಕಳು ಸರ್ಕಾರಿ ಶಾಲೆಯಲ್ಲಿಯೇ ಓದಬೇಕೆಂದು ಕಾನೂನು ಮಾಡಿದರೆ?*
ಕೇವಲ 'ಓದಬೇಕು' ಎಂದರೆ ಆದೀತು. ಬೆಳಗ್ಗೆ ಖಾಸಗಿ ಶಾಲೆ ಮುಗಿಸಿಬಂದು ಇಲ್ಲೇ ಓದಿಕೊಳ್ಳಬಹುದು.

ಆರ್. ಮಧುಸೂದನ್, ಹಾಸನ
*ಸೊಳ್ಳೆಗಳೇಕೆ ಕಚ್ಚುವಾಗ ಜಾತಿ ನೋಡಿ ಕಚ್ಚುವುದಿಲ್ಲ?*




ಮನುಷ್ಯ ರಕ್ತ ಟೇಸ್ಟೊಂದೇ ವಲಂ!

ಎಂ.ಎ. ಕುಮಾರ್, ಬೆಂಗಳೂರು
*ಚಪಲಕ್ಕೂ, ಚೇಷ್ಟೆಗೂ ಏನು ವ್ಯತ್ಯಾಸ?*
ಚಪಲ ಚೇಷ್ಟೆಯ ಜನಕ.

ಎಚ್.ಆರ್. ದೇಸಾಯಿ, ರಾಯಚೂರು
*ನಾವು ಹೆಣವಾದ ನಂತರ ಯಾರಿಗೆ ಹೆಚ್ಚು ಉಪಕಾರಿ?*
ಬ್ಯಾಕ್ಟೀರಿಯಾಗೆ.

ವಿ. ಹೇಮಂತಕುಮಾರ್, ಬೆಂಗಳೂರು
*ಹಣ್ಣಿನಂತೆ ಹಣವೂ ಮರದಲ್ಲಿ ಸಿಗುವಂತಿದ್ದರೆ?*
ಮರಕ್ಕೆ ಕಲ್ಲು ಹೊಡೆಯುವವರು ಹೆಚ್ಚಾಗಿ ಜಲ್ಲಿಕಲ್ಲಿನ ದರ ಏರುತ್ತಿತ್ತು.

ಸವಿತಾ ರವಿ, ಸುಟ್ಟಟ್ಟಿ
*ಕಲ್ಪನೆ, ಕನಸು, ವಾಸ್ತವ; ಮೂರರ ವ್ಯತ್ಯಾಸವೇನು?*
ಕಲ್ಪನೆ ರೂಪಸಿ; ಕನಸು ಪ್ರೇಯಸಿ; ವಾಸ್ತವ ಹೆಂಡತಿ.

ಪಿ.ಜಿ. ರಾಘವೇಂದ್ರ, ಮೈಸೂರು
*ಮುತ್ತು ಮಾರುವವಳನ್ನು ಮಾರಿಮುತ್ತು ಎನ್ನಬಹುದೆ?*
ಊಹೂಂ. ಅವಳು ಮುತ್ತುಮಾರಮ್ಮ; ಮುತ್ತು ಕೊಟ್ಟು ಸಾಂಕ್ರಾಮಿಕ ರೋಗ ಹರಡುವವಳು ಮಾರಿಮುತ್ತು.

ಕೆ. ಸವಿತಾಕುಮಾರಿ, ಬೆಂಗಳೂರು
*ಈಗಿನ ಹುಡುಗಿಯರು ಪೌಡರ್ ಹಾಕುವುದಿಲ್ಲ. ಆದರೆ ಹುಡುಗರು ಹಾಕುತ್ತಾರಲ್ಲಾ, ಕಾರಣ?*
ತಮಗೆ ಡಿಮ್ಯಾಂಡ್ ಏರಿರುವುದನ್ನು ಅರಿತ ಹುಡುಗಿಯರು ಹುಡುಗರಿಗೆ ಸರಿಯಾಗಿ ಬೆವರಿಳಿಸುತ್ತಿರುವುದರಿಂದ....

ಡೈರಿ ವಿಶ್ವನಾಥ್, ಬೆಂಗಳೂರು
*ಪ್ರಶ್ನೆಗಳೂ ಸೆನ್ಸಾರ್ ಆಗುತ್ತವೆಯೆ?*
ಊಹೂಂ. ಕೆಲವೊಮ್ಮೆ ಸೆನ್ಸ್‌ಲೆಸ್ ಆಗಿರುತ್ತವಷ್ಟೆ.

ಆರೆಮ್ಮೆಸ್ ನಾಗ, ಬೆಂಗಳೂರು
*ಶವಸಂಸ್ಕಾರಕ್ಕೆ ಮೊದಲು ಶವಕ್ಕೆ ತಣ್ಣೀರಿನ ಸ್ನಾನ ಮಾಡಿಸುವುದು ಸಮಂಜಸವೆ?*
ಅದು 'ಯಾವಾನೋ ಅವ್ನ ಮಲ್ಗಿರೋವ್ನ್ಮೇಲ್ತಣ್ಣೀರ್ ಸುರಿದಿದ್ದೂ...' ಅನ್ನುತ್ತಾ ಏಳಕ್ಕೆ ಹೆಣಕ್ಕೆ ಕೊನೆಯ ಚಾನ್ಸ್.

ಕೆ.ಜಿ. ಶೇಖರಪ್ಪ, ಅರಸೀಕೆರೆ
*2032ರಲ್ಲಿ ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಿಂದಲೂ ವಿಮಾನಪ್ರಯಾಣ ಸಾಮಾನ್ಯ ವಿಷಯವಾಗುತ್ತದೆ. ಇದಕ್ಕೇನಂತೀರಿ?*
ಅಂದಿನ ಮಾತು ಬಿಡಿ; ಇಂದು ನಿಮಗೆ ಯಾರೋ ಸರಿಯಾಗಿ ರೈಲು ಹತ್ತಿಸಿದ್ದಾರೆ ಅಂತೀನಿ.

## ಬಹುಮಾನಿತ ಪ್ರಶ್ನೆ

ವಿ.ಎಸ್. ಹಿಂದೂಪುರ, ಬಳ್ಳಾರಿ
*ಸನ್ಮಾನ ಮಾಡುವಾಗ ಶಾಲನ್ನು ಏಕೆ ಹೊದಿಸುತ್ತಾರೆ?*
ಅಂದಿನ ಪದ್ಧತಿ. ಕವಿಗಳು ಬಡವರಾಗಿರುತ್ತಿದ್ದುದರಿಂದ ಜುಬ್ಬ, ಬನೀನುಗಳ ತೂತು ಮುಚ್ಚಲೆಂದು.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ನೀವೆಂದಾದರೂ 'ಲವ್ ಲೆಟರ್' ಬರೆದಿದ್ದೀರಾ?*
ರಾಮ್ ಆಗಿದ್ದೂ ಬರೆಯದಿರಲಾದೀತೇ! 'ಬೇಟಾ ಲವ್ ಔರ್ ಬೇಟಾ ಕುಶ್' ಎಂದು ಬರೆದಿದ್ದೇನೆ!

ಅನಂತಪದ್ಮನಾಭ ಹೆಚ್. ಎಂ., ಮೈಸೂರು
*ಗೂಬೆಗೂ, ಗೊಂಬೆಗೂ ಸಾಮ್ಯವೇನು?*
ಎರಡೂ ಕೂಡಿಸಲ್ಪಡುತ್ತವೆ.

ಹಾಡ್ಯ ಬ. ಜಯಾನಂದ, ಮೈಸೂರು
*ದ್ವಾಪರದಲ್ಲಿ ಪಾಂಡವರು ಗೆದ್ದರು. ಈ ಕಲಿಯುಗದಲ್ಲಿ?*



ಕೆರೆಗಳನ್ನು ಕೆರೆದುಕೊಂಡು, ಲೇಔಟ್ ಮಾಡಿದ **pond** ಅವರು!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ನಗಿಸುವವನಿಗೂ, ಅಳಿಸುವವನಿಗೂ ವ್ಯತ್ಯಾಸ?*
ಒಂದೇ ಅಕ್ಷರ; ಇವನು ವಿದೂಷಕ; ಅವನು ದೂಷಕ!

ಎಂ.ಎನ್. ಸೋಮಶೇಖರ್, ಮೈಸೂರು
ರಾವಣನಿಗಿಂತ ಆಂಜನೇಯನಿಗೆ ಹೆಚ್ಚು ಶಕ್ತಿ ಹೇಗೆ ಬಂತು?
ರಾವಣನದು ರಾಜಕಾಯ. ಆಂಜನೇಯನದು ಹನುಮಾನ್ ಗರಡಿಯಲ್ಲಿ ಕಸುವಾದ ಮೈ.

■ ರಾಮ್